**ಓ.ಎಸ್ ನಂ. 111/2021 ಪಿ.ಡಬ್ಲ್ಯೂ-1 (ನಾಗೇಶ್)**

**ಸಾಕ್ಷಿಯನ್ನು ದಿನಾಂಕಃ 25.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದವರಿದ ಪಾಟೀ ಸವಾಲುಃ ಪ್ರತಿವಾದಿ 4 ಮತ್ತು 5 ರವರ ಪರ ವಕೀಲರಾದ ಶ್ರೀ ಪಿ.ಎನ್.ಜಿ. ವಕೀಲರಿಂದಃ**

10. ದಾವಾಸ್ತಿಗೆ ಸಂಬಂಧಿಸಿದಂತೆ ದಾವಾ ಹೂಡುವ ಸಮಯದಲ್ಲಿ ತೆಗೆಸಿದಂತಹ ಪಹಣಿ ಪತ್ರಿಕೆಯನ್ನು ಹೊರತುಪಡಿಸಿ ದಾವಾ ಹೂಡುವ ಪೂರ್ವದಲ್ಲಿ ಇದ್ದ ಪಹಣಿ ಪತ್ರಿಕೆಗಳು ಮತ್ತು ನಂತರದ ಪಹಣಿ ಪತ್ರಿಕಗೆಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯ ಸಾಕ್ಷಿಯು ಎಲ್ಲಾ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಾತನ ಹೆಸರು ಮುದ್ದಮಾದಪ್ಪ. ನಮ್ಮ ತಾತ ರವರ ತಂದೆ ಮತ್ತು ತಾಯಿಯ ಹೆಸರು ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯು ನಾನು ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಾತ ಮುದ್ದ ಮಾದಪ್ಪ ರವರ ಹೆಸರಿನಲ್ಲಿ ದಾವಾಸ್ತಿಗಳು ಇದ್ದ ಬಗ್ಗೆ ತೋರಿಸಲು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಮ್ಮ ತಾತ ಮುದ್ದಮಾದಪ್ಪನವರ ಹೆಸರಿನಲ್ಲಾಗಲೀ ಅಥವಾ ಅವರ ತಂದೆಯವರ ಹೆಸರಿನಲ್ಲಿ ದಾವಾಸ್ತಿಗಳು ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಾತನ ಹೆಸರಿನಲ್ಲಿರುವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ದಾವಾ ಪತ್ರದಲ್ಲಿ ನಮ್ಮ ತಾತ ಮುದ್ದು ಮಾದಪ್ಪ ರವರಿಗೆ ದಾವಾ ಸ್ವತ್ತುಗಗಳು ಹೇಗೆ ಬಂದಿರುತ್ತದೆ ಎಂದು ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿಗಳು ನಮ್ಮ ತಾತ ಮುದ್ದಮಾದಪ್ಪ ರವರ ಹೆಸರಿನಲ್ಲಿ ಇರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂ "ಐ" ರ ದಾವಾ ಸ್ವತ್ತನ್ನು ಮಾದಮ್ಮ

ರವರು ಕ್ರಯಕ್ಕೆ ಪಡೆದುಕೊಂಡಿರುವಂತಹ ಆಸ್ತಿಯಾಗಿರುತ್ತದೆ ಎಂದರೆ ಸರಿ. ಈಗಲೂ ಸಹ ಸದರಿ ಆಸ್ತಿಯು ಪ್ರತಿವಾದಿ 4 ಮತ್ತು 6 ರವರ ಹೆಸರಿಲ್ಲಿ ಜಂಟಿಯಾಗಿರುತ್ತದೆ ಎಂದರೆ ಸರಿ. ಎಲ್ಲಾ ದಾವಾಸ್ತಿಗಳನ್ನು ಪ್ರತಿವಾದಿಗಳು ಭಾಗ ಮಾಡಿಕೊಂಡು ಅವರವರ ಭಾಗದ ಸ್ವಾಧೀನದಲ್ಲಿ ಸುಮಾರು 30 ವರ್ಷದಿಂದಲೂ ಇರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಾಯಿಯ ಸಹಿಯನ್ನು ಯಾವುದು ಪಡೆದುಕೊಂಡಿರುವುದಿಲ್ಲ ಎಂದು ನುಡಿದು, ನನ್ನ ತಾಯಿಯು ಯಾವುದೇ ಭಾಗ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ರವರ ಹೆಸರಿಗೆ ಖಾತೆ ಇರುವ ಬಗ್ಗೆ ಪ್ರಶ್ನಿಸಿ ಎಲ್ಲಿಯೂ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಗೆ ಪ್ರತಿವಾದಿಗಳು ಭಾಗ ಮಾಡಿಕೊಂಡ ದಿನದಿಂದ ಪ್ರತ್ಯೇಕವಾದ ಸ್ವಾದೀನದಲ್ಲಿದ್ದು ಮತ್ತು ನಮ್ಮ ಸ್ವಾದೀನದ ಜಮೀನಿನ ಮೇಲೆ ಸಾಲ ಪಡೆದು ವ್ಯವಸಾಯವನ್ನು ಮಾಡಿಕೊಂಡು ಹೋಗುತ್ತಿರುತ್ತಾರೆ ಎಂದರೆ ಸಾಕ್ಷಿಯು ಅವರೇ ಸ್ವಾಧೀನದಲ್ಲಿರುತ್ತಾರೆ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಅವರ ಭಾಗದ ಜಮೀನಿನ ಮೇಲೆ ಸಾಲವನ್ನು ಪಡೆದುಕೊಂಡಿರುವ ಬಗ್ಗೆ ನೀವು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಗಳು ನಮ್ಮ ತಾಯಿಯವರ ಪಿತ್ರಾರ್ಜಿತ ಆಸ್ತಿ ಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಹೂಡುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ನೋಟೀಸ್ ಅನ್ನು ನೀಡಿರುವುದಿಲ್ಲ, ಸಾಕ್ಷಿಯು ಮುಂದುವರಿದು ಊರಿನಲ್ಲಿ ಪಂಚಯಿತಿಯನ್ನು ಮಾಡಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಂಚಾಯಿತಿಯನ್ನು 2011 ರಲ್ಲಿ ಮಾಡಿಸಲಾಗಿರುತ್ತದೆ ದಿನಾಂಕ ನನಗೆ ಸರಿಯಾಗಿ ನೆನಪು ಇರುವುದಿಲ್ಲ. ಪಂಚಾಯಿತಿಯಲ್ಲಿ ನನ್ನ ತಾಯಿ, ಊರಿನ ಹಿರಿಯರು, ಮತ್ತು ಮಾವಂದಿರು ಸೇರಿಕೊಂಡಿದ್ದರು. ದಿಃ 03.02.2011 ರಲ್ಲಿ ನನ್ನ ತಾಯಿಯವರು ಅವರ ಭಾಗದ ಹಕ್ಕಿಗೆ ಪ್ರತಿ ಪಲವಾಗಿ ಪ್ರತಿವಾದಿ ಮತ್ತು ಅವರ

ತಾಯಿ ಮಾದಮ್ಮ ರವರಿಂದ ಹಣವನ್ನು ಪಡೆದುಕೊಂಡು ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾಯಿಯವರು ಯಾವುದೇ ಪ್ರತಿಫಲವನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ದಿನ ನನ್ನ ತಾಯಿಯವರು ಪಂಚಾಯಿತಿ ದಾರರ ಸಮ್ಮುಖದಲ್ಲ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 03.02.2011 ರಲ್ಲಿ ಆದಂತಹ ಹಕ್ಕು ಖುಲಾಸೆ ಪತ್ರವನ್ನು ತೋರಿಸಿ ಅದರಲ್ಲಿ ನಮ್ಮ ತಾಯಿಯವರು ಮೇಲೆ ಹೇಳಿದಂತೆ ರೂ.50 ಸಾವಿರ ಗಳನ್ನು ಪಡೆದುಕೊಂಡು ಅವರ ಹಕ್ಕನ್ನು ಪ್ರತಿವಾದಿಗಳಿಗೆ ಮತ್ತು ಅವರ ತಾಯಿರವರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ಅವರ ಸಹಿಯನ್ನು ಮಾಡುತ್ತಾರೆಯೇ ಎಂದರೆ ಸರಿಯಲ್ಲ. ಅವರು ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾರೆ ಎಂದು ನುಡಿಯುತ್ತಾರೆ. ಹಕ್ಕು ದಾವೆ ಸಲ್ಲಿಸುವ ಪೂರ್ವದಲ್ಲಿ ತಾಯಿಯವರು ಸಹಿ ಮಾಡುತ್ತಿದ್ದರು ಆದರೆ ವಾದ ಪತ್ರದಲ್ಲಿ ಉದ್ದೇಶ ಪೂರ್ವಕವಾಗಿ ನನ್ನ ತಾಯಿಯವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ವಿಧ್ಯಾಭ್ಯಾಸ ಮಾಡಿರುವುದಿಲ್ಲ ಸಾಕ್ಷಿಯ ಮಂದುವರಿಂದು ಅವರು ವಿಧ್ಯಾಭ್ಯಾಸ ಮಾಡಿರುವ ಬಗ್ಗೆ ನನಗೆತಿಳಿದಿರುವುದಿಲ್ಲ. ನನ್ನ ತಾಯಿಯವರು ವಿಧ್ಯಾಭ್ಯಾಸ ಮಾಡಿರುವ ವಿಚಾರ ಗೊತ್ತಿದ್ದರೂ ಮತ್ತು ಸಹಿ ಹಾಕುವ ವಿಚಾರ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ಅವರ ಭಾಗದ ಹಕ್ಕನ್ನು ಬಿಟ್ಟು ಕೊಟ್ಟಿರುವುದರಿಂದ ಅವರಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೆಳಿದಂತೆ ದಾವಿಯನ್ನು ಹೂಡುವ ಪೂರ್ವದಲ್ಲಿ ಯಾವುದೇ ಪಂಚಾಯಿತಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಆಗಿಲ್ಲದೆ ಇರುವುದರಿಂದ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತನವರ ಮನೆಗೆ ಸಂಬಂಧಿಸಿದಂತಹ ದಾಖಲಾತಿಗಳು ಮತ್ತು ಜಾಗಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಮನೆ ಮತ್ತು ಜಾಗಕ್ಕೆ

ಸಂಬಂಧಿಸಿದಂತಹ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದೂ ಇಲ್ಲ ಮತ್ತು ಸದರಿ ಸ್ವತ್ತುಗಳನ್ನು ದಾವಾಸ್ತಿಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ತಾಯಿಗೂ ಮತ್ತು ನನಗೂ ದಾವಾಸ್ತಿಯಲ್ಲಿ ಯಾವುದೇ ಭಾಗದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ